ತೋಡುವುದು ಬಿಡುವುದು ಬೇರೆ ವಿಚಾರ ಆದರೆ ಈ ವಿಚಾರದಲ್ಲಿ ಎಲ್ಲಿ ನೀರಿನ ಅಭಾವ ವಿಶೇಷವಾಗಿ ಇದೆ ಆಲ್ಲಿ ಬಾವಿಗಳನ್ನು ತೋಡಲಿಕ್ಕೆ ನಾವು ಸಿದ್ಧರಾಗಿದ್ದೇವೆ ಮತ್ತೆ ಮಾನ್ಯ ಸದಸ್ಯರು ಯಾವ ಯಾವ ಗ್ರಾಮಗಳಲ್ಲಿ ಮತ್ತು ಯಾವ ತಾಲ್ಲೂಕಿನಲ್ಲಿ ಈ ನೀರಿನ ಅಭಾವದ ಪರಿಸ್ಥಿತಿ ಇದೆ, ಆ ಸ್ಥಳಗಳನ್ನು ತಿಳಿಸಿದರೆ ನಾವು ಹೆಚ್ಚು ತೀವ್ರತೆಯಿಂದ ಆ ಸ್ಥಳಗಳ ಬಗ್ಗೆ ನಾವು ಕಾರ್ಯಕ್ರಮವನ್ನು ಕೈಗೊಳ್ಳಲು ಪ್ರಾರಂಭ ಮಾಡುತ್ತೇವೆ.

SRI K. LAKKAPPA.—I would like to know from the Hon'ble Minister which are the agencies that are operating in implementing these schemes in the district level as well as in the rural level in the towns and whether those agencies are working properly and on those agencies which have not worked properly, whether any action has been taken? so far as failure of the borewells, fixing of agency and inordinate delay in digging borewells and also misappropriation of funds through Zilla Parished organisation, I would like to know the action taken by the Govt. Whether they have paid more money in digging these wells instead of paying reasonable rate resulting in great loss to the tune of several lakhs of rupees ? In fact, it so happened in Tumkur and it also happened elsewhere in the State. Therefore, whether the Government has taken any action in this direction against all those people who are working in collusion with this organisation and the administration ? Whether action has been taken to black-list those people who indulged in such mal-practices?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚಿತವಾಗಿ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇಂತಹ ಕೊಳವೆ ಬಾವಿಗಳನ್ನು ತೋಡಲು ಗುತ್ತಿಗೆ ಕೊಡತಕ್ಕ ವ್ಯವಸ್ಥೆ ಇತ್ತು ಇಂತಹ ಕೆಲಸಗಳನ್ನು ಖಾಸಗಿಯವರೂ ಮಾಡುತ್ತಿದ್ದರು ಹಾಗೂ ಸರ್ಕಾರದಿಂದ ಸಹ ಮಾಡಲಾಗಿದೆ ಮತ್ತು ಆಗ್ರೋ ಇಂಡಸ್ಟ್ರೀಸ್‌ನಿಂದ ಸಹ ಬಾವಿಗಳನ್ನು ತೆಗಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ ಸಮಗ್ರವಾಗಿ ಇದರ ಕಡೆ ಗಮನ ಕೊಟ್ಟು ಮುಂಬರುವ ವರ್ಷಗಳಲ್ಲಿ ಒಂದು ರೀತಿಯ ಏಜೆನ್ಸಿ ಮುಖಾಂತರವಾಗಿ ಈ ಒಂದು ಯೋಜನೆಯನ್ನು ಕಾರ್ಯಗತ ಮಾಡಬೇಕೂ ಎಂದು ಸರ್ಕಾರ ಯೋಚನೆ ಮಾಡುತ್ತಿದೆ. ಶೀಘ್ರದಲ್ಲಿಯೇ ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಒಂದು ಮಾತು ಹೇಳಿದ್ದಾರೆ ಏನೆಂದರೆ, ಯಾರು ತಪ್ಪು ಮಾಡಿದ್ದಾರೆ, ಮತ್ತು ಯಾರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಕೆಲಸ ಮಾಡಿದ್ದಾರೆ ಎಂದು ಏನು ಹೇಳಿದ್ದಾರೆ ಇದರ ಬಗ್ಗೆ ತೀವ್ರ ಯೋಚನೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ರಾಜ್ಯದ ನಗರ ಪ್ರದೇಶಗಳಲ್ಲಿ ಸೊಳ್ಳೆ ಕಾಟ

೧೩೭ ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ). ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಾಗೂ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಸೊಳ್ಳೆ ಕಾಟ ಹೆಚ್ಚಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಸೊಳ್ಳೆ ಕಾಟವನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಸೊಳ್ಳೆ ಕಾಟ ನಿವಾರಿಸಲು ಈ ಕೆಳಕಂಡ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

೧) ಸೊಳ್ಳೆ ಉತ್ಪತ್ತಿಯಾಗುವ ನಿಂತ ನೀರು ಚರಂಡಿಯ ನೀರನ್ನು ಸರಾಗವಾಗಿ ಹರಿಯಲಂ ಸಣ್ಣ ಕಾಮಗಾರಿ ಕೆಲಸವನ್ನು ಕೈಗೊಳ್ಳುವುದು

೨) ವಾರಕ್ಕೊಮ್ಮೆ ಸೊಳ್ಳೆ ಉತ್ಪತ್ತಿ ಸ್ಥಳಗಳಿಗೆ ಕೀಟನಾಶಕಗಳನ್ನು ಸಿಂಪಡಿಸುವುದು

೩) ಭಾವಿ, ಕೆರೆ ಮತ್ತು ಕೊಳಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಮೀನುಗಳನ್ನು ಬಿಡುವುದು ಮತ್ತು

೪) ಸಾರ್ವಜನಿಕರಿಗೆ ಸೊಳ್ಳೆ ಕಾಟವನ್ನು ತಡೆಗಟ್ಟಲು ಮನೆಯ ಒಳಭಾಗ ಮತ್ತು ಸುತ್ತಮುತ್ತ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಲು ಆರೋಗ್ಯ ಶಿಕ್ಷಣ ನೀಡುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಸಚಿವರು ಸೊಳ್ಳೆ ಕಾಟವನ್ನು ನಿರ್ಮೂಲನೆ ಮಾಡಲು ಸೊಳ್ಳೆ ಉತ್ಪತ್ತಿ ಸ್ಥಳಗಳಿಗೆ ಕೀಟನಾಶಕಗಳನ್ನು ಸಿಂಪಡಿಸುವ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಈ ಕೀಟನಾಶಕಗಳು ಯಾವುವು ಎಂದು ನಾನು ಕೇಳುತ್ತಿದ್ದೇನೆ ಮತ್ತು ಇವುಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆಯೇ ಎಂಬುದನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.— ಮಾನ್ಯ ಅಧ್ಯಕ್ಷರೆ, ಈ ಕೀಟನಾಶಕದ ಹೆಸರು ,, ಪೆರಿಥ್ರೆಮ್ ,, ಎಂದು. ಈ ನಾಶಕ ಪರಿಣಾಮಕಾರಿಯಾಗಿ ಇದೆಯೇ ಎಂಬ ಮಾನ್ಯ ಸದಸ್ಯರ ಪ್ರಶ್ನೆಗೆ ಪರಿಣಾಮಕಾರಿಯಾಗಿದೆ ಎಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಕೇಳುತ್ತಿರುವ ಉದ್ದೇಶ, ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸೊಳ್ಳೆಗಳು ವಿಶೇಷವಾಗಿ ಜಾಸ್ತಿ ಇದೆ. ಇದರ ನಿರ್ಮೂಲನದ ಪೂರ್ಣ ಜವಾಬ್ದಾರಿ ಸರ್ಕಾರದ್ದೇ ಎಂದು ನಾನು ಹೇಳುವುದಿಲ್ಲ. ನಿಮ್ಮ ಮೇಲೆ ನಾನು ತಪ್ಪು ಹೊರಿಸುತ್ತಿಲ್ಲ. ನನಗೆ ತಿಳಿದಿರುವ ಪ್ರಕಾರ ಈ ಕೀಟನಾಶಕಗಳು ಸಂಪೂರ್ಣವಾಗಿ ಪರಿಣಾಮಕಾರಿ ಅಲ್ಲವೆಂಬುದು ನಿಮ್ಮ ಅಧಿಕಾರಿಗಳಿಗೆ ಸಹಿತ ಗೊತ್ತಿರತಕ್ಕ ವಿಷಯ, ಇದಕ್ಕೆ ಬೇರೆ ಏನಾದರೂ ಪ್ರಯತ್ನ ಮಾಡಬೇಕಾಗುತ್ತದೆ. ನೀರು ನಿಲ್ಲದಂತೆ ತೆಗೆದುಕೊಳ್ಳುವ ಕ್ರಮದಿಂದ ಹೆಚ್ಚಿನ ಪರಿಣಾಮ ಆಗುವುದಿಲ್ಲ. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸೊಳ್ಳೆಗಳ ಕಾಟವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ ಇದೆ. ಪಾಂಡಿಚೆರಿಯಲ್ಲಿ ಕೇಂದ್ರ ಸರ್ಕಾರದ ಒಂದು ಸಂಸ್ಥೆ ಇದೆ. ಅವರು ಒಂದು ಪ್ರಾಜೆಕ್ಟ್ ರಿಪೋರ್ಟ್ ಅನ್ನು ಸೊಳ್ಳೆ ನಿರ್ಮೂಲನದ ಬಗ್ಗೆ ತಯಾರಿಸಿದ್ದಾರೆ. ಅಲ್ಲಿಂದ ರಿಪೋರ್ಟ್ ತರಿಸಿಕೊಂಡು ಅದನ್ನು ಇಲ್ಲಿಯೂ ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ಎಂಬ ದೃಷ್ಟಿಯಿಂದ ಈ ಪ್ರಶ್ನೆ ಹಾಕಿದ್ದೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಸದಸ್ಯರ ಸಲಹೆ ಉತ್ತಮವಾದುದು. ಈ ಸೊಳ್ಳೆ ಕಾಟ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಸಹ ಇತ್ತು. ಮಾನ್ಯ ಸದಸ್ಯರ ಸಲಹೆಯನ್ನು ಸ್ವಾಗತ ಮಾಡುತ್ತೇನೆ. ಈ ಸೊಳ್ಳೆ ಕಾಟ ದೇಶವ್ಯಾಪ್ತಿ ಇದೆ.

ಒಬ್ಬ ಮಾನ್ಯ ಸದಸ್ಯರು.— ಮೊನ್ನೆಯವರೆಗೆ ಮಾನ್ಯ ಸಿಂಧ್ಯರವರ ಸರ್ಕಾರ ಇತ್ತಲ್ಲ. ಆಗ ಆರೋಗ್ಯ ಸಚಿವರಾದ ತಾವೇ ಇದನ್ನು ನಿರ್ಮೂಲನೆ ಮಾಡಬಹುದಿತ್ತಲ್ಲ.....

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅಂದರೆ ಇಲ್ಲಿ ನಾವು ಪ್ರಶ್ನೆಗಳನ್ನು ಕೇಳುವುದಕ್ಕಾ ಬೇಡ ಸಲಹೆಗಳನ್ನು ಕೊಡುವುದೂ ಬೇಡವೆಂದು ಕಾಣುತ್ತದೆ. ೧೮೦ ಜನ ನಾವು ಗೆದ್ದಿದ್ದೇವೆ, ಕಾಂಗ್ರೆಸ್‌ನವರು ಮಾತ್ರ ಪ್ರಶ್ನೆ ಹಾಕಬಹುದು, ನಾವು ಮಾತ್ರ ಅಧಿಕಾರಿಗಳು ಕೊಟ್ಟ ಉತ್ತರವನ್ನು ಕೇಳಿಕೊಂಡು ಹೋಗಬೇಕಾ. ಎಂದು ಇದರ ಅರ್ಥವೇ ? ಕಾಂಗ್ರೆಸ್ ಮತ್ತು ಜನತಾ ಎಂಬ ಪ್ರಶ್ನೆ ಇದರಲ್ಲಿ ಎಲ್ಲಿ ಬರುತ್ತದೆ ? ನಾವು ಇದ್ದಾಗ ಸೊಳ್ಳೆ ಕಾಟ ಇರಲಿಲ್ಲ ಎಂದು ನಾನು ಹೇಳಲಿಲ್ಲ. ಮೊದಲು ಐದು ಪರ್ಸೆಂಟ್ ಇತ್ತು ಅದು ಈಗ ಹತ್ತು ಪರ್ಸೆಂಟ್ ಆಗಿರಬಹುದು. ಅದನ್ನು ಕಡಿಮೆ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ ? ಈ ವಿಚಾರದಲ್ಲಿ ಬರೀ ಅಧಿಕಾರಿಗಳು ಕೊಟ್ಟ ಉತ್ತರವನ್ನು ಕೇಳಿಕೊಂಡು ಹೋಗುವುದಾದರೆ ಏನು ಪ್ರಯೋಜನ ? ನಾನು ತಮ್ಮಿಂದ ಇಂತಹ ಉತ್ತರವನ್ನು ನಿರೀಕ್ಷಿಸಿರಲಿಲ್ಲ.

(ಉತ್ತರವಿಲ್ಲ)